ಇ) ಮೃತರ ಸಂಖ್ಯೆ 71

ಈ) ಜಿಲ್ಲಾವಾರು ನೆರೆ ಪರಿಹಾರ ಕಾರ್ಯಗಳಿಗೆ ಖರ್ಚು ಮಾಡಿದ ಹಣದ ವಿವರ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಖರ್ಚು ಮಾಡಿದ ಹಣ	ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಖರ್ಚು ಮಾಡಿದ ಹಣ
1)	ಬೆಳಗಾವಿ	14.21	10)	ಕೊಡಗು	6.35
2)	ಬಳ್ಳಾರಿ	29.00	11)	ಕೋಲಾರ	10.74
3)	ಬಿಜಾಪುರ	21.80	12)	ಮಂಡ್ಯ	5.75
4)	ಚಿಕ್ಕಮಗಳೂರು	-	13)	ಮೈಸೂರು	3.52
5)	ಚಿತ್ರದುರ್ಗ	0.41	14)	ರಾಯಚೂರು	92.23
6)	ದಕ್ಷಿಣ ಕನ್ನಡ	10.89	15)	ಶಿವಮೊಗ್ಗ	21.89
7)	ಧಾರವಾಡ	131.10	16)	ಉತ್ತರ ಕನ್ನಡ	24.35
8)	ಹಾಸನ	-			
9)	ಗುಲ್ಬರ್ಗಾ	29.25			
				ಒಟ್ಟು	401.49

ಉ) ನೆರೆ ಪರಿಹಾರ ಕಾರ್ಯಗಳಿಗೆ ರೂ. 100.00 ಕೋಟಿಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿ ದಿನಾಂಕ 26.7.94ರಂದು ಕೇಂದ್ರ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿದೆ.

ಊ) ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ತನ್ನ ವಾರ್ಷಿಕ ವಂತಿಗೆ ರೂ. 20.25 ಕೋಟಿಗಳನ್ನು ಬಿಡುಗಡೆ ಮಾಡಿದೆ. ಹಾಗೂ ಪ್ರವಾಹದಿಂದ ಸತ್ತವರ ಕುಟುಂಬಗಳಿಗೆ, ಪ್ರತಿ ಮರಣಕ್ಕೆ ರೂ. 50,000.00 ನಂತೆ ಅನುಕಂಪ ಪರಿಹಾರ ನೀಡಲು ರೂ. 32.00 ಲಕ್ಷಗಳನ್ನು ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ ಬಗ್ಗೆ ತೊಂದರೆ

530 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ ಬಗ್ಗೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಕೆಲವು ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಆದೇಶದಂತೆ ಜಾಯಿಂಟ್ ಅಕೌಂಟಿನಲ್ಲಿ ಹಣ ಪಾವತಿ ಮಾಡಿರುವುದರಿಂದ ಶಾಲಾ ಶುಲ್ಕವನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡುವಾಗ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಆಕಾಡಮಿ ಚೀಫ್ ಜನರಲ್ ಎಜುಕೇಷನ್ ನಡೆಸುವ ಕಾಲೇಜುಗಳಲ್ಲಿ ಈ ಫೀಸು ವಸೂಲಾತಿಯಾಗುವುದರಿಂದ ಇದನ್ನು ಹೇಗೆ ಪರಿಹರಿಸಲಾಗುವುದು?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜಕಲ್ಯಾಣ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) 'ಅ' ನಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬಡಜನರಿಗೆ ಆಶ್ರಯ ಯೋಜನೆಯಲ್ಲಿ ನಿವೇಶನ

314 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ನೀವೇಶನ ರಹಿತ ಬಡಜನರಿಗೆ ನಿವೇಶನ ಒದಗಿಸಲು 1989 ರಿಂದ 1994ರ ವರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? (ವಿವರ ನೀಡುವುದು)

ಆ) ಪ್ರತಿ ಸಾಲಿಗೆ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಹಾಗೂ ಮಂಜೂರು ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು? ಮಂಜೂರು ಮಾಡಬೇಕಾಗಿರುವ ಸಂಖ್ಯೆ ಎಷ್ಟು?

ಈ) ನಿವೇಶನ ರಹಿತ ಬಡಜನರಿಂದ ಪ್ರತಿಯೊಂದು ನಿವೇಶನಕ್ಕೆ ರೂ. 750-00 ರಂತೆ ಹಣ ತುಂಬಿಸಿ ಕೊಂಡಿರುವುದು ನಿಜವೇ? ಈ ರೀತಿ ಎಷ್ಟು ಜನರಿಂದ ಎಷ್ಟು ಹಣ ಪಡೆಯಲಾಗಿದೆ?

ಉ) ನಿವೇಶನ ರಹಿತ ಫಲಾನುಭವಿಗಳ ಸಂಖ್ಯೆ ಎಷ್ಟು? ಇವರಿಗೆ ನಿವೇಶನ ಒದಗಿಸಲು ಸರ್ಕಾರ ಮಾಡಿರುವ ಯೋಜನೆ ಹಾಗೂ ಕಾರ್ಯಕ್ರಮಗಳೇನು ಮತ್ತು ಯಾವಾಗ ನಿವೇಶನಗಳನ್ನು ಒದಗಿಸಲಾಗುವುದು?

ಶ್ರೀ ಗೋಪಿನಾಥ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ವ್ಯಾಪ್ತಿಯಲ್ಲಿರುವ ಮೂರು ವಿಧಾನಸಭೆ ಕ್ಷೇತ್ರ ಟಾಸ್ಕ್ ಫೋರ್ಸ್ ಸಮಿತಿಯು ಸನ್ 1989 ರಿಂದ 1994ರ ವರೆಗೆ ಒಟ್ಟು 6495 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ)

ಸನ್	1991-92	-	ಇಲ್ಲ
	1992-93	-	3600
	1993-94	-	ಇಲ್ಲ
	1994-95	-	2895

ಇ) ಈ ವರೆಗೆ ಒಟ್ಟು 1423 ಫಲಾನುಭವಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ನಿವೇಶನ ಮಂಜೂರು ಮಾಡಬೇಕಾದ ಫಲಾನುಭವಿಗಳ ಸಂಖ್ಯೆ 5072.

ಈ) ಹೌದು, ಒಟ್ಟು 3857 ಜನರಿಂದ ಪ್ರತಿಯೊಬ್ಬನು 750-00 ರಂತೆ ಒಟ್ಟು ರೂ. 28,92,750-00 ಪಡೆಯಲಾಗಿದೆ ಹಾಗೂ ಫೆಬ್ರವರಿ 94 ರಿಂದ ಈ ರೀತಿ ವಸೂಲಿ ಮಾಡುವುದು ನಿಲ್ಲಿಸಲಾಗಿದೆ.

ಉ) ಒಟ್ಟು 6495 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1423 ಫಲಾನುಭವಿಗಳಿಗೆ ನಿವೇಶನ ವಿತರಿಸಲಾಗಿದೆ. ಉಳಿದ 5072 ಫಲಾನುಭವಿಗಳಿಗೆ ನಿವೇಶನ ಹಂಚಿಕೆಗಾಗಿ ಜಮೀನುಗಳನ್ನು ಗುರುತಿಸುವ ಕ್ರಮ ಕೈಕೊಳ್ಳಲಾಗುತ್ತಿದೆ.